ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಬಿಜಾಪುರ ವಿಭಾಗದ ವ್ಯಾಪ್ತಿಯಲ್ಲಿ ಬಿಜಾಪುರ ಘಟಕ-1 ಹಾಗೂ ಬಿಜಾಪುರ - 2, ಇಂಡಿ, ಸಿಂದಗಿ, ಜಮಖಂಡಿ ಹಾಗೂ ಮುಧೋಳ ಘಟಕಗಳಿರುತ್ತವೆ.

ಆ) ಬಿಜಾಪುರ ಜಿಲ್ಲೆಯನ್ನು ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಾಗಿ ಪರಿವರ್ತಿಸಿದ ನಂತರ ಅನುಕ್ರಮವಾಗಿ, ಬಿಜಾಪುರ-1 ಹಾಗೂ ಬಿಜಾಪುರ - 2 ಇಂಡಿ, ಸಿಂದಗಿ, ಜಮಖಂಡಿ ಹಾಗೂ ಮುಧೋಳ ಘಟಕಗಳು ಬಿಜಾಪುರ ವಿಭಾಗದ ವ್ಯಾಪ್ತಿಯಲ್ಲಿಯೂ, ಬಾಗಲಕೋಟೆ, ಬಾದಮಿ, ಇಳಕಲ್ ಹಾಗೂ ಮುದ್ದೇಬಿಹಾಳ ಘಟಕಗಳು ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ ಬರುತ್ತವೆ.

ಇ) ಮುಧೋಳ ಜಮಖಂಡಿ ಡಿಪೋಗಳು ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯಲ್ಲಿ ಹಾಗೂ ಮುದ್ದೇಬಿಹಾಳ ಡಿಪೋ ಬಿಜಾಪುರ ಜಿಲ್ಲೆಯ ವ್ಯಾಪ್ತಿಗೊಳಪಡುತ್ತವೆ.

ಈ) ಬಾಗಲಕೋಟೆ ಜಿಲ್ಲೆಯ ಕುದಾಯ ವ್ಯಾಪ್ತಿಯಲ್ಲಿರುವ ಜಮಖಂಡಿ ಹಾಗೂ ಮುಧೋಳ ಘಟಕಗಳು ಮಾ.ಕ.ರ. ಸಾ.ಸಂಸ್ಥೆಯ ಬಿಜಾಪುರ ವಿಭಾಗದ ಆಡಳಿತಕ್ಕೊಳಪಟ್ಟಿದೆ. ಹಾಗೂ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಘಟಕವು ಪ್ರಸ್ತುತ ಮಾ.ಕ.ರ.ಸಾ.ಸಂಸ್ಥೆಯ ಬಾಗಲಕೋಟೆ ವಿಭಾಗದ ಆಡಳಿತಕ್ಕೊಳಪಟ್ಟಿದೆ.

ಉ) ಈ ಕುರಿತು ಈಗಾಗಲೇ ಮಾ.ಕ.ರ. ಸಾ.ಸಂಸ್ಥೆಯ ನಿರ್ದೇಶಕ ಮಂಡಳಿ ಅನುಮೋದನೆ ಪಡೆದು ಆಯಾ ಕುದಾಯ ಜಿಲ್ಲೆಯ ವ್ಯಾಪ್ತಿಯ ಘಟಕಗಳನ್ನು ಆಯಾ ವಿಭಾಗಕ್ಕೆ ಸೇರಿಸುವ ಕುರಿತು ನಿರ್ಧರಿಸಲಾಗಿದ್ದು, ಆಡಳಿತಾತ್ಮಕ ಕಾರಣಗಳಿಂದಾಗಿ, ಈ ಡಿಪೋಗಳ ನೌಕರರ ಸೇವಾ ಜೇಷ್ಟತೆ ಹಾಗೂ ಬಡ್ತಿ ನಿಗದಿಸುವಲ್ಲಿ ವಿಳಂಬವಾಗಿದೆ. ಆದಾಗ್ಯೂ, ದಿನಾಂಕ: 1-1-2003 ರಿಂದ ಜಾರಿಗೆ ಬರುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ನಾಗಮಂಗಲ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆಲಸಗಳ ಕಾಮಗಾರಿ

2044 (2220) - ಶ್ರೀ ಚಲುವರಾಯ ಸ್ವಾಮಿ ಎನ್. (ನಾಗಮಂಗಲ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ 2002-03 ರಲ್ಲಿ ಪ್ರಗತಿಯಲ್ಲಿರುವ ಸಣ್ಣ ನೀರಾವರಿ ಕೆಲಸಗಳ ಕಾಮಗಾರಿ ಯಾವುವು;

ಆ) ನಾಗಮಂಗಲ ತಾಲ್ಲೂಕಿನ ಸಣ್ಣ ನೀರಾವರಿ ಇಲಾಖೆಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬರಬೇಕಾಗಿರುವ ಹಣದ ಮೊತ್ತವೆಷ್ಟು;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) 2 ಸಣ್ಣ ನೀರಾವರಿ ಕಾಮಗಾರಿಗಳು ಪ್ರಗತಿಯಲ್ಲಿವೆ. 4 ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ. ಹಾಗೂ 2 ಕಾಮಗಾರಿಗಳು ಸರ್ವವಿಧದಲ್ಲೂ ಪೂರ್ಣಗೊಂಡಿವೆ. ವಿವರಗಳನ್ನು ಅನುಬಂಧ - 1 ರಲ್ಲಿ ಲಗತ್ತಿಸಿದೆ.

ಆ) ಪೂರ್ಣಗೊಂಡಿರುವ 2 ಕಾಮಕಾರಿಗಳಿಗೆ ರೂ. 17.24 ಲಕ್ಷ ಬಿಲ್ಲು ಬಾಕಿ ಇರುತ್ತದೆ.

ಅನುಬಂಧ - 1

ನಾಗಮಂಗಲ ತಾಲ್ಲೂಕಿನಲ್ಲಿ ಬರುವ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇದೆ

ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷಗಳಲ್ಲಿ	2002-03 ನೇ ಸಾಲಿನ ಅನುದಾನ	ಈವರೆಗಿನ ಒಟ್ಟು ವೆಚ್ಚ	ಬಾಕಿ ಇರುವ ಬಿಲ್ಲುಗಳ ಮೊತ್ತ	ಷರಾ
'ಅ'	ಪ್ರಗತಿಯಲ್ಲಿರುವಂತಹ ಕಾಮಗಾರಿಗಳು:-					
1)	ಕಾಳಿಗನ ಹಳ್ಳಿ ಹತ್ತಿರ ಹೊಸ ಕೆರೆ ನಿರ್ಮಾಣ	18.00	0.15	11.828	0.17	ಪೈಪ್ ಔಟಲೆಟ್ ಕಾಮಗಾರಿಗಳು ಮಾತ್ರ ಬಾಕಿ ಉಳಿದಿರುತ್ತದೆ.
2)	ಜೋಡಿ ಅಲ್ಬಹಳ್ಳಿ ಹತ್ತಿರ ಹೊಸಕೆರೆ ನಿರ್ಮಾಣ	25.00	0.15	36.00	11.48	ಸದರಿ ಕಾಮಗಾರಿಯ ಕೆರೆಯ ಏರಿ ರಿವಿಟ್‌ಮೆಂಟ್ ಕಾಮಗಾರಿ ಭಾಗಶಃ ಪೂರ್ಣಗೊಂಡಿದ್ದು, ಕೋಡಿ ಮತ್ತು ಕಾಲುವೆ ಹಾಗೂ ತೂಬು ನಿರ್ಮಾಣ ಕಾಮಗಾರಿಗಳು ಬಾಕಿ ಉಳಿದಿರುತ್ತದೆ.
'ಆ'	ಮುಕ್ತಾಯ ಹಂತದಲ್ಲಿರುವ ಕಾಮಗಾರಿಗಳು:-					
1)	ಮಂಚಿಪಟ್ಟಣ ಹುಚ್ಚಿಕೆರೆ ಅಭಿವೃದ್ಧಿ	15.00	0.06	4.242	5.74	ಸದರಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ ಗುತ್ತಿಗೆದಾರಿಗೆ ಹಣ ಪಾವತಿಯಾಗಬೇಕಾಗಿರುತ್ತದೆ
2)	ರಾಮಚಂದ್ರ ಅಗ್ರಹಾರ ಕೆರೆ ಅಭಿವೃದ್ಧಿ	25.00	0.06	14.428	5.00	ಸದರಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಗುತ್ತಿಗೆದಾರರಿಗೆ ಹಣ ಪಾವತಿಯಾಗಬೇಕಾಗಿರುತ್ತದೆ.
3)	ದೊಡ್ಡ ಜಟಕ ಕೆರೆ ಅಭಿವೃದ್ಧಿ	5.00	0.25	0.050	0.70	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಗುತ್ತಿಗೆದಾರರಿಗೆ ಹಣ ಪಾವತಿಯಾಗಬೇಕಾಗಿದೆ.
4)	ಬಸವನ ಕೆರೆ ನಾಲಾಭಿವೃದ್ಧಿ (ಜೋಡಿ ಅಲ್ಬಹಳ್ಳಿ ಬಲದಂಡೆ ನಾಲೆ)	10.00	0.25	7.59	-	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.
'ಇ'	ಪೂರ್ಣಗೊಂಡಿರುವ ಕಾಮಗಾರಿಗಳು:-					
1)	ಬಿಂಡಿಗನವಿಲೆ ಕೆರೆ ಅಭಿವೃದ್ಧಿ	15.00	0.06	0.448	15.72	ಕಾಮಗಾರಿ ಪೂರ್ಣಗೊಂಡಿರುತ್ತದೆ.
2)	ಪಡುವಲಪಟ್ಟಣ ಊರಮುಂದಿನ ಕೆರೆ ಅಭಿವೃದ್ಧಿ	3.00	0.25	1.44	1.52	ಕಾಮಗಾರಿ ಪೂರ್ಣಗೊಂಡಿರುತ್ತದೆ.
	ಒಟ್ಟು	116.00	1.23	70.086	40.33	